# ಕರ್ನಾಟಕ ಲೋಕ ಸೇವಾ ಆಯೋಗ

ಸಂಖ್ಯೆ:ಪಿಎಸ್ ಸಿ 43 ಆರ್ ಟಿಬಿ-4/2023-24/1384 ದಿನಾಂಕ:27-09-2023

## ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್ ಸಿ 01 ಆರ್ ಟಿ(4)ಬಿ-4/2016, ದಿನಾಂಕ:15-03-2017 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಪಿಎಸ್ ಸಿ 01 ಆರ್ ಟಿ(4)ಬಿ-1/2017, ದಿನಾಂಕ:15-04-2017ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿನ ವಸತಿ ಶಾಲಾ ಶಿಕ್ಷಕರ 123(32+91 ಹೈ.ಕ) ಹುದ್ದೆಗಳ ನೇಮಕಾತಿಗೆ ನಿಯಮಾನುಸಾರ ಶೇ.10ರಷ್ಟು ಹೆಚ್ಚುವರಿ ಪಟ್ಟಿಯನ್ನು ಮತ್ತು ಕಟ್-ಆಫ್ ಅಂಕಗಳ ಪಟ್ಟಿಯನ್ನು ದಿನಾಂಕ:20-09-2023ರಂದು ಆಯೋಗದ ಅಂತರ್ಜಾಲ http://kpsc.kar.nic.in/ lists/cut off marks ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಪ್ರಸ್ತುತ ನೇಮಕಾತಿ ಪ್ರಾಧಿಕಾರವು ಹೆಚ್ಚುವರಿ ಆಯ್ಕೆಪಟ್ಟಿಗಾಗಿ ಸಲ್ಲಿಸಿದ ಬೇಡಿಕೆ ಪತ್ರ/ಪ್ರಸ್ತಾವನೆಗನುಗುಣವಾಗಿ (ನಮೂನೆ-7) ಹೆಚ್ಚುವರಿ ಆಯ್ಕೆಪಟ್ಟಿಯನ್ನು ನಿಯಮಾನುಸಾರ ಸಿದ್ಧಪಡಿಸಲು ಕ್ರಮವಹಿಸಲಾಗುವುದು.

ತತ್ಸಂಬಂಧ ಆಯೋಗವು ಸದರಿ ಹುದ್ದೆಗಳ ನೇಮಕಾತಿಗೆ ಈಗಾಗಲೇ ದಿನಾಂಕ:20-09-2023ರಂದು ಪ್ರಕಟಿಸಲಾದ **ಹೆಚ್ಚುವರಿ ಪಟ್ಟಿಯಲ್ಲಿ ಅರ್ಹರಾಗಿರುವ ಅಭ್ಯರ್ಥಿಗಳ ಪೈಕಿ ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಲು ಇಚ್ಛಿಸದ (Not Willing) ಅಭ್ಯರ್ಥಿಗಳು ಮಾತ್ರ ದಿ:08-10-2023ರ** ಒಳಗಾಗಿ ಯಾವುದಾದರೊಂದು ಮೂಲ ಗುರುತಿನ ಚೀಟಿಯೊಂದಿಗೆ **'ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001'** ಇವರ ಸಮ್ಮುಖದಲ್ಲಿ ಖುದ್ದು ಹಾಜರಾಗಿ ಲಿಖಿತವಾಗಿ ಸ್ವ-ಇಚ್ಛಾ ಹೇಳಿಕೆಯನ್ನು **(Willingness)** ಸಲ್ಲಿಸುವಂತೆ ಸೂಚಿಸಿದೆ.

(ಕೆ.ಎಸ್ ಲತಾಕುಮಾರಿ)
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.